ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಸರೋಜಿನಿ ಮಹಿಷಿಯವರ ವರದಿ ಬಗ್ಗೆ ಅವರಿಗೆ ಸ್ಪಷ್ಟತೆ ಇಲ್ಲ. ಅವತ್ತು ಏನು ಮಾತನಾಡಿದರೂ ಇವತ್ತು ಅದೇ ಮಾತನಾಡುತ್ತಿದ್ದಾರೆ. ಸರೋಜಿನಿ ಮಹಿಷಿಯವರ ವರದಿಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಇಲ್ಲ. ಪ್ರಾಮಾಣಿಕವಾದ ಚಿಂತನೆ ಇಲ್ಲ. ಮತ್ತು ಚಾಮರಾಜನಗರಕ್ಕೆ 10 ಸಾವಿರ ಜನರಿಗೆ ಉದ್ಯೋಗ ಕೊಡಬೇಕೆಂದು ಹೇಳಿದ್ದೇನೆ. ಅದರ ಬಗ್ಗೆ ಹೇಳಲಿಲ್ಲ. ನಾನು ಸರ್ಕಾರದ ಉತ್ತರವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ. ಇವರಿಗೆ ಸರೋಜಿನಿ ಮಹಿಷಿಯವರ ಬಗ್ಗೆ ಪ್ರಾಮಾಣಿಕತೆ ಇಲ್ಲ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು ಸಭಾತ್ಯಾಗ ಮಾಡುವಾಗ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಪಿ.ಜಿ.ಆರ್, ಸಿಂಧ್ಯಾ: ಮಾನ್ಯ ಅಧ್ಯಕ್ಷರೇ ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳುತ್ತಿದ್ದಾರೆ ಅದು ಸತ್ಯಕ್ಕೆ ದೂರವಾಗಿರತಕ್ಕಂಥ ವಿಚಾರ. ಅವರು ಏನಾದರೂ ಹೇಳಲಿ, ಅವರು ದ್ರೋಹಿಗಳು ಅಂತಾದರೂ ಹೇಳಲಿ, ಏನಾದರೂ ಹೇಳಲಿ ಅದನ್ನೆಲ್ಲಾ ನಾನು ಸ್ವೀಕಾರ ಮಾಡುತ್ತೇನೆ. ಏನು ಬೇಕಾದರೂ ಅವರು ಹೇಳಿಕೊಳ್ಳಬಹುದು ನನಗೇನೂ ತೊಂದರೆ ಇಲ್ಲಸ್ವಾಮಿ .

ಉಪಾಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರು ಹೊರಗೆ ಹೋಗುತ್ತಿದ್ದಾರೆ. ಅವರ ವಿಚಾರದ ಬಗ್ಗೆ ಪುನಃ ಏಕೆ ಚರ್ಚೆ ಮಾಡುತ್ತೀರಿ? ಈಗ ಇನ್ನೂ ಇಬ್ಬರು ಮಂತ್ರಿಗಳು ಉತ್ತರ ಕೊಡಬೇಕು. ನಿಮಗೆಲ್ಲಾ ಬಹಳಷ್ಟು ಗೌರವ ಕೊಟ್ಟು ಒಳ್ಳೆಯ ಸುಂದರವಾಗಿರತಕ್ಕಂಥ ಉತ್ತರ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೇ ಒಂದು ಕ್ಲಾರಿಫಿಕೇಷನ್ ನಾನು ತಮಗೆ ಏನು ಹೇಳಿದೆ, ನನ್ನ ನೋವನ್ನು ತಾವು ಅರ್ಥ ಮಾಡಿಕೊಂಡಿಲ್ಲ. ಅಧ್ಯಕ್ಷರು ಪೀಠದಲ್ಲಿದ್ದಾಗ ನಾನು ಏನು ಹೇಳಿದೆ ಅಂದರೆ ಈ ನಾಡಿನ ಒಂದು ಕೋಟಿ 65 ಲಕ್ಷ ಜನರ ಪ್ರತಿನಿಧಿಯಾಗಿ, ಯಾರದ್ದು ಧ್ವನಿ ಇಲ್ಲ, ಯಾರು ಶೋಷಿತ ವರ್ಗದವರು ಇದ್ದಾರೆ. ಯಾರಿಗೆ ಸಾಮಾಜಿಕ ನ್ಯಾಯ ಸಿಕ್ಕಿಲ್ಲ, ಅನ್ಯಾಯಕ್ಕೆ ಒಳಗಾಗಿದ್ದಾರೋ ಅವರ ಪ್ರತಿನಿಧಿಯಾಗಿ ಬಂದಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ ಇದು ಏನಿದು ಪದೇ ಪದೇ ಕೇಳುವುದಕ್ಕೆ ನಮಗೂ ಆಗುವುದಿಲ್ಲ ಸಾರ್ ಇಲ್ಲಿ ಬಹಳ ಜನ ಮಾತನಾಡಿದ್ದಾರೆ. ಇದನ್ನೇ ತಾವು ಪದೇ ಪದೇ ಹೇಳುತ್ತಿದ್ದರೆ ಹೇಗೆ? ಆ ಜನ ನಿಮಗೊಬ್ಬರಿಗೆ ಓಟು ಹಾಕಿ ಕಳುಹಿಸಿಲ್ಲ ನಮಗೂ ಓಟು ಹಾಕಿ ಕಳುಹಿಸಿದ್ದಾರೆ.